**ದಿಃ22-04-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ ಕೆ.ಎನ್.ಆರ್. ವಕೀಲರಿಂದಃ**

ನಾನು 1 ನೇ ಎದುದಾರರ ಸಾಮಾನ್ಯ ಮುಕ್ತಿಯಾರನಾಮೆಯಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನನಗೆ ಈ ಪ್ರಕರಣದ ಕುರಿತಾಗಿ ಎಲ್ಲಾ ಮಾಹಿತಿ ಇದೆ. ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆ ರವರು ನಮ್ಮ ಟ್ರೈಲರ್‌ನ ಚಾಲಕನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಹಾಗಾಗಿ ಅರ್ಜಿದಾರರಿಗೆ ಪರಿಹಾರವನ್ನು ಪಾವತಿಸಲು ನಾವೇ ಬಾಧ್ಯಸ್ಥರಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರವನ್ನು ಪಾವತಿಸುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 3 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದಃ**

2. 1 ನೇ ಎದುರುದಾರರು ನನ್ನ ದೊಡ್ಡಮ್ಮ. 1 ನೇ ಎದುರುದಾರರಿಗೆ ಮಕ್ಕಳು ಇಲ್ಲ. ಟ್ರೈಲರ್ 1 ನೇ ಎದುರುದಾರರ ಹೆಸರಿನಲ್ಲಿ ಇದ್ದು, ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ಟ್ರೈಲರ್‌ನ್ನು 1 ನೇ ಎದುರುದಾರರ ಪತಿ ಖರೀದಿಸಿದ್ದರು, ಅವರ ಮರಣಾ ನಂತರ 1 ನೇ ಎದುರುದಾರರ ಹೆಸರಿಗೆ ಬಂದಿದೆ. 1 ನೇ ಎದುರುದಾರರೆ ಟ್ರೈಲರ್‌ನ್ನು ನಿರ್ವಹಣೆ ಮಾಡುತ್ತಿದ್ದರು. 1 ನೇ ಎದುರುದಾರರು ಟ್ರೈಲರ್‌ನ್ನು ಮಾತ್ರ ಹೊಂದಿದ್ದರು. ನಿ.ಆರ್.3 ರ ದಾಖಲಾತಿ ಕೆ.ಎ.17/ಟಿ-2681 ರ ಟ್ರೈಲರ್‌ಗೆ ಸೇರಿದ್ದು. ಅಪಘಾತದ ಸಮಯದಲ್ಲಿ ನಾನು ಊರಿನಲ್ಲಿ ಇದ್ದೆನು. ನಾನು ಅಪಘಾತದ ಸ್ಥಳಕ್ಕೆ ಹೋಗಿಲ್ಲ. ಪೊಲೀಸರ ಬಳಿ ಮಾಹಿತಿಯನ್ನು ಪಡೆದಿದ್ದೆನು. ಜಯಪ್ಪ ಎಂಬುವವರಿಗೆ ಸೇರಿದ ಟ್ರಾಕ್ಟರ್‌ಗೆ 1 ನೇ ಎದುರುದಾರರಿಗೆ ಸೇರಿದ ಟ್ರೈಲರ್‌ನ್ನು ಅಳವಡಿಸಿಕೊಂಡು ತೆಗೆದುಕೊಂಡು ಹೋಗಿದ್ದರು. ಸದರಿ ದಿನದಂದು ಟ್ರಾಕ್ಟರ್‌ನ್ನು ಜಯಪ್ಪರವರೆ ಚಾಲನೆ ಮಾಡುತ್ತಿದ್ದರು. 1 ನೇ ಎದುರುದಾರರಿಗೆ ಸೇರಿದ ಕೆ.ಎ.17-ಟಿ-2681 ರ ಟ್ರೈಲರ್‌ಗೆ ವಿಮೆ ಇಲ್ಲ ಎಂದರೆ ಸರಿ. 1 ನೇ ಎದುರುದಾರರನ್ನು ಠಾಣೆಗೆ ಟ್ರೈಲರ್‌ನ್ನು ಬಿಡಿಸಿಕೊಳ್ಳುವ ಕಾಲಕ್ಕೆ ನಾನು ಮತ್ತು ನಮ್ಮ ಊರಿನ ಜನರು ಕರೆದುಕೊಂಡು

ಹೋಗಿದ್ದೆವು. ನಾನು 5 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯಕ್ಕೆ ಟ್ರಾಕ್ಟರ್‌ನ ಮಾಲೀಕರಾದ ಜಯಪ್ಪರವರು ಮೇಲ್ಮನವಿಯನ್ನು ಸಲ್ಲಿಸಿದ್ದರು. ಟ್ರಾಕ್ಟರ್‌ನ ಮಾಲೀಕರಾದ ಜಯಪ್ಪ ಮತ್ತು ಟ್ರಾಕ್ಟರ್‌ನ ಚಾಲಕರಾದ ಜಯಪ್ಪ ರವರು ಇಬ್ಬರು ಸಹ ಬೇರೆ ಬೇರೆ ಇರುತ್ತಾರೆ.

3. ಜಯಪ್ಪರವರು ಟೆಂಪೋ ಟ್ರಾವಲರ್ ವಾಹನದ ಮಾಲೀಕರ ವಿರುದ್ಧ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ನಾನು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಹಾಜರಾಗಿಲ್ಲ. ಜಯಪ್ಪರವರು ಅವರ ವಿರುದ್ಧದ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸುವಂತೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಜಯಪ್ಪರವರು ಮೇಲ್ಮನವಿಯೊಂದಿಗೆ ಯಾವೆಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಮಾರುತಿ ಎಂಬುವವರು ಟೆಂಪೋ ಟ್ರಾವಲರ್ ವಾಹನದ ಮಾಲೀಕರು. ಜಯಪ್ಪರವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಮಾರುತಿ ರವರನ್ನು ಪಕ್ಷಗಾರರನ್ನಾಗಿ ಸೇರಿಸಿದ್ದಾರೆ ಎಂದರೆ ಸರಿ. ಜಯಪ್ಪರವರು ಟ್ರೈಲರ್‌ನ್ನು ಎಡಭಾಗದಲ್ಲಿ ನಿಲ್ಲಿಸಿ ಪಂಚರ್ ಆಗಿದ್ದ ಚಕ್ರವನ್ನು ತೆಗೆದುಕೊಂಡು ಪಂಚರ್ ಹಾಕಿಸಿಕೊಂಡು ಬರಲು ಹೋಗಿದ್ದಾಗ, ಟೆಂಪೋ ಟ್ರಾವಲರ್ ಚಾಲಕನು ಟ್ರೈಲರ್‌ನ ಚಕ್ರವನ್ನು ತೆಗೆದಿದ್ದ ಭಾಗಕ್ಕೆ ಡಿಕ್ಕಿಪಡಿಸಿರುತ್ತಾನೆ. ಟೆಂಪೋ ಟ್ರಾವಲರ್ ವಾಹನದ ಚಾಲಕನ ಹೆಸರು ಧನುಷ್.

4. ಅಪಘಾತವು ರಾತ್ರಿ 7.30 ಕ್ಕೆ ಏರ್ಪಟ್ಟಿರುತ್ತದೆ. ಸದರಿ ರಸ್ತೆ ವಿಶಾಲವಾಗಿದೆ ಎಂದರೆ ಸರಿ. ಟ್ರೈಲರ್‌ಗೆ ಪಾರ್ಕಿಂಗ್ ಲೈಟ್ ಇರಲಿಲ್ಲ ಎಂದರೆ ಸರಿ. ಟ್ರೈಲರ್‌ನ್ನು ನಿಲ್ಲಿಸಿದ್ದ ಜಾಗದಲ್ಲಿ ಗಿಡದ ರೆಂಬೆಯನ್ನು ಹಾಕಿದ್ದರು. ಕೆಂಪು ಬಟ್ಟೆಯನ್ನು ಹಾಕಿರಲಿಲ್ಲ. ಟ್ರೈಲರ್‌ನ್ನು ಸಂಪೂರ್ಣವಾಗಿ ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿದ್ದರು. ದೂರನ್ನು ನೀಡಿದ ಪಿರ್ಯಾದುದಾರರು ಮತ್ತು ಪೊಲೀಸರು ಹಾಗೂ 1 ನೇ ಎದುರುದಾರರ ನಡುವೆ ಯಾವುದೇ ವೈಶಮ್ಯ ಇಲ್ಲ. ನಿಆರ್.4 ರ ಆದೇಶದ ಪ್ರತಿಯನ್ನು ನನಗೆ ನಮ್ಮ ವಕೀಲರು ನೀಡಿರುತ್ತಾರೆ. ಜಯಪ್ಪರವರು ನನಗೆ ಯಾವುದೇ ಆದೇಶದ ಪ್ರತಿಯನ್ನು ನೀಡಿಲ್ಲ. ಜಯಪ್ಪರವರು ಟ್ರಾಕ್ಟರ್‌ನ ಚಾಲಕ ಎಂದು ಆತನ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ಜಯಪ್ಪರವರು ಅಪಘಾತದ ಸಮಯದಲ್ಲಿ ನಾನು ಇರಲಿಲ್ಲ ಮತ್ತು ನನ್ನ ಟ್ರಾಕ್ಟರ್ ಇರಲಿಲ್ಲ ಎಂದು ಹೇಳಿ ರದ್ದುಪಡಿಸುವಂತೆ ಕೋರಿದ್ದರು ಎಂದರೆ ಸರಿ. 1 ನೇ ಎದುರುದಾರರು ನಮ್ಮ ತಪ್ಪಿನಿಂದ ಅಪಘಾತ ಆಗಿಲ್ಲ ಎಂದು ಹೇಳಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದೇವೆ. 1 ನೇ ಎದುರುದಾರರು ಸಲ್ಲಿಸಿರುವ ಮೇಲ್ಮನವಿಯ ಕುರಿತು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಜಯಪ್ಪರವರು ಸಲ್ಲಿಸಿದ್ದ

ಮೇಲ್ಮನವಿಯಲ್ಲಿ ಅವರ ವಿರುದ್ಧದ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸಿರುತ್ತಾರೆ. ಟ್ರೈಲರ್‌ನ ತಪ್ಪಿನಿಂದ ಅಪಘಾತ ಏರ್ಪಟ್ಟಿರುವ ಕಾರಣ 1ನೇ ಎದುರುದಾರರೆ ಪರಿಹಾರವನ್ನು ಪಾವತಿಸಲು ಬಾಧ್ಯಸ್ಥರಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ